**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ 83 ಗ್ರಾನೀಸ(4)14

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.06.2014

**ಸುತ್ತೋಲೆ**

ವಿಷಯ: ಕುಡಿಯುವ ಶುದ್ಧ ನೀರು ಮತ್ತು ವಿದ್ಯುತ್ ಪೋಲಾಗದಂತೆ ಎಚ್ಚರಿಕೆ ಕ್ರಮವಹಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/67/ಗ್ರಾನೀಸ(3)/2010, ದಿ:05.02.2011.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/7/ಗ್ರಾನೀಸ(4)2014,ದಿ:28.04.014.

---

ಮೇಲೆ ಉಲ್ಲೇಖಿಸಿರುವ ಸುತ್ತೋಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಸಮರ್ಪಕ ಸರಬರಾಜಿನ ಬಗ್ಗೆ ಈಗಾಗಲೇ ಹಲವು ಮಾರ್ಗಸೂಚಿಗಳನ್ನು ಸುಲಲಿತ ವ್ಯವಸ್ಥೆಯ ಅನುಷ್ಠಾನಕ್ಕಾಗಿ ನೀಡಲಾಗಿತ್ತು. ಆದಾಗ್ಯೂ ಸಹ ಇನ್ನು ಕೆಲವು ಕಡೆಗಳಲ್ಲಿ ಓವರ್‌ಹೆಡ್ ಟ್ಯಾಂಕ್ ತುಂಬಿ ನೀರು ಹರಿದು ಅತ್ಯಮೂಲ್ಯವಾದ ಶುದ್ಧ ಕುಡಿಯುವ ನೀರು ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ನೀರಿನ ಪಂಪಿಂಗ್ ಸಲುವಾಗಿ ಉಪಯೋಗವಾದ ವಿದ್ಯುತ್ ಸಹ ಪೋಲಾಗುತ್ತಿರುವುದು ಗಂಭೀರ ವಿಷಯವಾಗಿದೆ.

- ಆದುದರಿಂದ ಯಾವುದೇ ಓವರ್‌ಹೆಡ್ ಟ್ಯಾಂಕ್‌ನಿಂದ ನೀರು ತುಂಬಿ ವೃಥಾ ಹರಿದು ಪೋಲಾಗದಂತೆ ಹಾಗೂ ಈ ಸಲುವಾಗಿನ ವಿದ್ಯುತ್ ಬಳಕೆ ಮಿತವಾಗಿರಲು ಮತ್ತು ಸಮಯೋಚಿತವಾಗಿರುವಂತೆ ನೋಡಿಕೊಳ್ಳಬೇಕು.
- ಇಷ್ಟಾಗಿಯೂ ಯಾವುದೇ ಕಾರಣದಿಂದ ಅತ್ಯಮೂಲ್ಯವಾದ ಶುದ್ಧ ಕುಡಿಯುವ ನೀರು ಪೋಲಾಗುತ್ತಿರುವ ಬಗ್ಗೆ ಮೌಖಿಕವಾಗಿ, ದೂರವಾಣಿ ಮೂಲಕ ಅಥವಾ ಇನ್ಯಾವುದೇ ಮಾಧ್ಯಮದ ಮೂಲಕ ತಿಳಿದು ಬಂದಲ್ಲಿ ತಕ್ಷಣವೇ ಇಂತಹ ಘಟನೆಗಳು ಸಂಭವಿಸದಂತೆ ಕ್ಷಿಪ್ರ ಕ್ರಮವಹಿಸಬೇಕು.
- ಶುದ್ಧ ಕುಡಿಯುವ ನೀರಿನ ಸರಬರಾಜಿನ ನಿರ್ವಹಣೆ / ಸಂರಕ್ಷಣೆ ಪ್ರಕ್ರಿಯೆಯಲ್ಲಿ ನಿರ್ಲಕ್ಷ್ಯತನದಿಂದ / ಬೇಜವಾಬ್ದಾರಿಯಿಂದ ವರ್ತಿಸಿರುವ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಿಸಿದ ನೌಕರರನ್ನು ಹಾಗೂ ಮೇಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಅವರುಗಳನ್ನು ನಿಯಮಾನುಸಾರ ಶಿಸ್ತು ಕ್ರಮಕ್ಕೆ ಒಳಪಡಿಸಲು ಮತ್ತು ಇಂತಹ ಹೊಣೆಗೇಡಿತನಕ್ಕೆ ಅವರಿಂದ ದಂಡ ವಸೂಲಿ ಮಾಡಲು ಸಹ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮವಹಿಸಬೇಕು.
- ಅಗತ್ಯವಿದ್ದಲ್ಲಿ, ಶುದ್ಧ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜಾಗುವಂತೆ ನಿರ್ದಿಷ್ಟ ಸಮಯ ನಿಗದಿಪಡಿಸಿ ಆ ಸಮಯದಲ್ಲಿ ನೀರನ್ನು ಪೂರೈಕೆ ಮಾಡಿ ವ್ಯವಸ್ಥೆಯ ನಿಯಂತ್ರಣದಲ್ಲಿ ಹತೋಟಿ ಸಾಧಿಸಲು ಸೂಚಿಸಿದೆ.
- ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ನೌಕರರು ಹಾಗೂ ಅಧಿಕಾರಿಗಳು ಸತತವಾಗಿ ಸ್ಥಳೀಯ **ಕಂಟ್ರೋಲ್ ರೂಂ ಮತ್ತು ರಾಜ್ಯಮಟ್ಟದ ಟೋಲ್‌ಫ್ರೀ ನಂಬರ್ +18004258666** ಜೊತೆಗೆ ನಿರಂತರ ಸಂಪರ್ಕ ಹೊಂದಿದ್ದು ದೂರುಗಳಿಗೆ ಆದ್ಯತೆ ಮೇಲೆ ಸ್ಪಂದಿಸಿ ಸೂಕ್ತ ಪರಿಹಾರ ಕ್ರಮಕೈಗೊಳ್ಳಬೇಕು.

...2

- ಜೊತೆಗೆ ಓವರ್‌ಹೆಡ್ ಟ್ಯಾಂಕ್‌ಗಳಲ್ಲಿ ನೀರು ತುಂಬಿ ಹರಿಯದಂತೆ ಬಾಲ್‌ವಾಲ್ವ್ ಅಥವಾ ಇನ್ನಾವುದೇ ತಾಂತ್ರಿಕ, ವೈಜ್ಞಾನಿಕ ಉಪಕರಣ ಹಾಗೂ ಆಧುನಿಕ ವಿಧಾನ ಬಳಸಿ ನೀರು ಪೋಲಾಗದಂತೆ ಹಾಗೂ ನೀರು ತುಂಬಿ ಹರಿದಲ್ಲಿ ವಿದ್ಯುತ್ ಪಂಪ್ ತಂತಾನೇ ಸ್ಥಗಿತಗೊಳ್ಳುವಂತೆ ಅಗತ್ಯ ಕ್ರಮವಹಿಸಬೇಕೆಂದು ತಿಳಿಸಿದೆ.

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಇಮೇಲ್: rk3452000@gmail.com
ಫೋನ್: 22032806, ಫ್ಯಾಕ್ಸ್: 22203175

ಇವರಿಗೆ:

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, 2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು-09.
3. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತಗಳು.
4. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಗಳು.
5. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನಸೌಧ ಬೆಂಗಳೂರುರವರ ಮಾಹಿತಿಗಾಗಿ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ (ಪಂ.ರಾಜ್) ಗ್ರಾಅಪಂ.ರಾಜ್ ಇಲಾಖೆ ಮತ್ತು ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು.
4. ನಿರ್ದೇಶಕರು, SWSM ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ ಗ್ರಾಅಪಂ.ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು-9.
5. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು-01.